1

**ಆಕಾಶವಾಣಿ** **31 ಜನೆವರಿ, 2026**

**ಪ್ರದೇಶ ಸಮಾಚಾರ** **ಶನಿವಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ** **ಮಧ್ಯಾಹ್ನ, 12 ಗಂಟೆಗೆ**

**<><><>**

**ನಾದಲೀಲೆಯ ಮಾಂತ್ರಿಕ, ಕನ್ನಡದ ಹೆಮ್ಮೆಯ,** ವರಕವಿ, ದ.ರಾ. ಬೇಂದ್ರೆ ಅವರ ಜನ್ಮದಿನವಿಂದು.

ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ತಮ್ಮ ಶ್ರದ್ಧಾ ಸುಮನ ಅರ್ಪಿಸಿ, ಜ್ಞಾನಪೀಠ ಹಾಗೂ ಪದ್ಮಶ್ರೀ ಪುರಸ್ಕೃತ, ಮೇರು ಕವಿ ಬೇಂದ್ರೆ ಅವರು, ತಮ್ಮ ಅದ್ಭುತ ಕವಿತೆಗಳ ಮೂಲಕ, ನವೋದಯ ಸಾಹಿತ್ಯವನ್ನು ಕಟ್ಟಿ ಬೆಳೆಸಿದ್ದಲ್ಲದೆ, ಕರ್ನಾಟಕ ಏಕೀಕರಣದ ಹೋರಾಟಕ್ಕೆ ಕಿಚ್ಚು ಹಚ್ಚಿದ ಧೀಮಂತ ಶಕ್ತಿ! ಕನ್ನಡಿಗರ ಹೃದಯದಲ್ಲಿ ಅಂಬಿಕಾತನಯದತ್ತರು ಎಂದೆಂದಿಗೂ ಅಮರ ಎಂದಿದ್ದಾರೆ.

**ಹರ್ಷ/ಹೊಂಗಲ್/ಎಕ್ಸ್ ಖಾತೆ**

<><><>

**ಸಂಸದರ ಸಾಂಸ್ಕೃತಿಕ ಮಹೋತ್ಸವ -2026ರ** ಪ್ರಯುಕ್ತ, ಹುಬ್ಬಳ್ಳಿ ಅಂತಾರಾಷ್ಟ್ರೀಯ ಗಾಳಿಪಟ ಹಾಗೂ ಸಾಂಸ್ಕೃತಿಕ ಉತ್ಸವ, ಕುಸುಗಲ್ ರಸ್ತೆಯ, ಆಕ್ಸ್‌ಫರ್ಡ್ ಕಾಲೇಜು ಪಕ್ಕದ ಮೈದಾನದಲ್ಲಿ, ಫೆಬ್ರುವರಿ 7 ಮತ್ತು 8 ರಂದು ನಡೆಯಲಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಏಳನೇ ಆವೃತ್ತಿಯ, ಅಂತಾರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ, ವಿವಿಧ ದೇಶಗಳಿಂದ, ಅಂತಾರಾಷ್ಟ್ರೀಯ ಖ್ಯಾತಿಯ ಗಾಳಿಪಟ ಪಟುಗಳು, ದೇಸಿ ಸಂಸ್ಕೃತಿ ಸಾರುವ, ವೈವಿಧ್ಯಮಯ ಗಾಳಿಪಟಗಳನ್ನು ಹಾರಿಸಲಿದ್ದಾರೆ ಎಂದರು.

**ಹರ್ಷ/ಹೊಂಗಲ್/ಎಕ್ಸ್ ಖಾತೆ**

<><><>

**ನಾಳೆ, ಫೆಬ್ರುವರಿ 1, ಭಾನುವಾರ,** ಕೇಂದ್ರದ ಮುಂಗಡ ಪತ್ರವನ್ನು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಲೋಕಸಭೆಯಲ್ಲಿ ಮಂಡಿಸಲಿದ್ದಾರೆ.

**ಹುಬ್ಬಳ್ಳಿಯ ಖ್ಯಾತ ಉದ್ಯಮಿ ವಸಂತ ಲದ್ವಾ** ಮಾತನಾಡಿ, ದಿವಂಗತ ಸುರೇಶ ಅಂಗಡಿ ಅವರು, ಕೇಂದ್ರ ಸಚಿವರಾಗಿದ್ದಾಗ ಪ್ರಸ್ತಾಪಿಸಿದ್ದ, 71 ದಶಾಂಶ 1 ಕಿಲೋ ಮೀಟರ್ ಉದ್ದದ, ಧಾರವಾಡ-ಕಿತ್ತೂರು-ಬೆಳಗಾವಿ ಹೊಸ ರೈಲು ಮಾರ್ಗ ಯೋಜನೆಗೆ, ಬಜೆಟ್‌ನಲ್ಲಿ ಪ್ರಾವಧಾನ ಕಲ್ಪಿಸಿ, ಆದ್ಯತೆ ನೀಡಿ ಘೋಷಿಸುವ ನಿರೀಕ್ಷೆ ಇದೆ, ಎಂದಿದ್ದಾರೆ.

**ಇನ್ನೋರ್ವ ಹಿರಿಯ ಉದ್ಯಮಿ, ಹುಬ್ಬಳ್ಳಿಯ ಮಹೇಂದ್ರ ಸಿಂಘಿ,** ಮಾತನಾಡಿ, ನೈಋತ್ಯ ರೇಲ್ವೆ ವ್ಯಾಪ್ತಿಯಲ್ಲಿ, ಹುಬ್ಬಳ್ಳಿ, ಬೆಂಗಳೂರು, ಮೈಸೂರು ವಿಭಾಗಗಳಿವೆ. ಹುಬ್ಬಳ್ಳಿಯಿಂದ, ಹೊಸ ದಿಲ್ಲಿಗೆ ಹೊಸ ವಂದೇ ಭಾರತ್ ರೈಲು ಸಂಚರಿಸಬೇಕು ಎಂಬುದು, ಈ ಭಾಗದ ಜನರ ಬೇಡಿಕೆ. ಏಮ್ಸ್ ಮಾದರಿಯಲ್ಲಿ, ಸುಸಜ್ಜಿತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ, ಕೇಂದ್ರ ಹಣಕಾಸು ಖಾತೆ ಸಚಿವರು, ಬಜೆಟ್‌ನಲ್ಲಿ ಪ್ರಾವಧಾನ ಕಲ್ಪಿಸುವ ನಿರೀಕ್ಷೆ ಹೊಂದಿದ್ದಾಗಿ, ತಿಳಿಸಿದ್ದಾರೆ.

**ಹರ್ಷ/ವಿವಿಧ ಮೂಲಗಳಿಂದ/ಕೇಂ.ಕಾ.ಹು.ಪ್ರ.**

<><><>

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,** ಸೆಲ್ಕೋ ಫೌಂಡೇಷನ್ ಸಹಯೋಗದಲ್ಲಿ, ಸೌರ ಸ್ವಾಸ್ಥ್ಯ ಯೋಜನೆ ಅಡಿ, ವಿಜಯಪುರದ 52 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಫಲಕಗಳನ್ನು, ಅಳವಡಿಸಿದೆ. ಸೌರ ಇ–ಮಿತ್ರ ಮೊಬೈಲ್ ಅಪ್ಲಿಕೇಶನ್, ವಿದ್ಯುತ್ ನಿರ್ವಹಣೆಗೆ ಸಹಕಾರಿಯಾಗಿದೆ.

ಪ್ರದೇಶ ಸಮಾಚಾರಕ್ಕಾಗಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ, ಅಪ್ಪಾಸಾಹೇಬ ಇನಾಮದಾರ, ಮಾಹಿತಿ ನೀಡಿದ್ದಾರೆ.

**ಅಪ್ಪಾಸಾಹೇಬ ಇನಾಮದಾರ ಧ್ವನಿ 35 ಸೆಕೆಂದುಗಳು**

**ಹರ್ಷ/ಪಿಟಿಸಿ ವಿಜಯಪುರ (43)**

<><><>

**ರಸ್ತೆ ಸುರಕ್ಷತಾ ಮಾಸಾಚರಣೆ**ಇಂದಿಗೆ ಸಂಪನ್ನಗೊಳ್ಳಲಿದೆ.

ಸಂಚಾರ ನಿಯಮಗಳ ಬಗ್ಗೆ, ಜನ ಜಾಗೃತಿ ಮೂಡಿಸಲು, ಸಾರಿಗೆ ಇಲಾಖೆ, ನಾಳೆ ಫೆಬ್ರುವರಿ 1 ರಂದು, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, 'ಸೇಫ್ ಥಾನ್ 2026'ನ್ನು, ಕಾರಣಾಂತರಗಳಿಂದ, ಮುಂದೂಡಿದೆ.

ಈಗಾಗಲೇ ಹೆಸರು ನೋಂದಾಯಿಸಿದವರು, ಮರು ನಿಗದಿಯಾದ ದಿನಾಂಕದಂದು, ಪಾಲ್ಗೊಳ್ಳಬಹುದು ಎಂದು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಅಪರ ಸಾರಿಗೆ ಆಯುಕ್ತರು, ತಿಳಿಸಿದ್ದಾರೆ.

**ಹರ್ಷ/ಉಮೇಶ/ಪ್ರಕಟಣೆ/ಕೆ.ವಾ.ಇ.ಬೆಂ.**

<><><>

**ಬೆಳಗಾವಿ ಜಿಲ್ಲೆ,**ರಾಯಬಾಗ ತಾಲೂಕಿನ, ಪ್ರಸಿದ್ಧ ತೀರ್ಥ ಕ್ಷೇತ್ರ, ಚಿಂಚಲಿ ಮಾಯಕ್ಕಾ ದೇವಿಯ ಜಾತ್ರಾ ಮಹೋತ್ಸವ, ನಾಳೆ, ಫೆಬ್ರುವರಿ 1 ರಿಂದ, 12ನೇ ತಾರೀಖಿನ ವರೆಗೆ, ವಿಜೃಂಭಣೆಯಿಂದ ನಡೆಯಲಿದೆ.

ಈ ಹಿನ್ನೆಲೆ, ವಿವಿಧ ಭಾಗಗಳಿಂದ ಆಗಮಿಸುವ ಭಕ್ತಾದಿಗಳ ಮತ್ತು ಪ್ರಯಾಣಿಕರ ಸುಗಮ ಪ್ರಯಾಣಕ್ಕಾಗಿ, ನೈಋತ್ಯ ರೇಲ್ವೆ, ಚಿಂಚಲಿ ರೈಲು ನಿಲ್ದಾಣದಲ್ಲಿ, ಎಂಟು ರೈಲುಗಳಿಗೆ, ತಾತ್ಕಾಲಿಕ ನಿಲುಗಡೆ ಕಲ್ಪಿಸಿದೆ.

**ಹರ್ಷ/ಉಮೇಶ/ಪ್ರಕಟಣೆ/ಪೊನ್ನುಮೊನ್**

<><><>

**ಗದಗ ಜಿಲ್ಲೆ, ಐತಿಹಾಸಿಕ ಲಕ್ಕುಂಡಿ** ಉತ್ಖನನದ ನಿರ್ದೇಶಕ, ಟಿ.ಎಂ. ಕೇಶವ ನಿನ್ನೆ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಅವರಿಗೆ 77 ವರ್ಷ ವಯಸ್ಸಾಗಿತ್ತು.

ಟಿ.ಎಂ. ಕೇಶವ ನೇತೃತ್ವದಲ್ಲಿ ನಡೆಯುತ್ತಿದ್ದ, ಲಕ್ಕುಂಡಿ ಉತ್ಖನನ ಕಾರ್ಯಕ್ಕೆ, ಕೇಶವ ಹಾಗೂ ಶೇಜೇಶ್ವರ ಹೆಸರಲ್ಲಿ, ಉತ್ಖನನಕ್ಕೆ ಪರವಾನಿಗೆ ಪಡೆಯಲಾಗಿತ್ತು.

ಪುರಾತತ್ವ ಇಲಾಖೆ ನಿವೃತ್ತ ಅಧಿಕಾರಿ ಕೇಶವ ಅವರಿಗೆ, ಉತ್ಖನನದ ಸ್ಥಳದಲ್ಲಿ, ಇಂದು ಶ್ರದ್ಧಾಂಜಲಿ ಸಭೆ ಜರುಗಲಿದೆ ಎಂದು, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ, ಶರಣು ಗೋಗೇರಿ, ತಿಳಿಸಿದ್ದಾರೆ.

**ಹರ್ಷ/ಉಮೇಶ/ಪ್ರಕಟಣೆ/ಪಿಟಿಸಿ ಗದಗ (57)**

<><><>

**ಇಬ್ಬರು ಬಾಲ ಹಾಗೂ ಕಿಶೋರ ಕಾರ್ಮಿಕ** ಮಕ್ಕಳನ್ನು ರಕ್ಷಿಸಲಾಗಿದೆ ಎಂದು, ಬಳ್ಳಾರಿ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ನಿರ್ದೇಶಕ, ಮೌನೇಶ ತಿಳಿಸಿದ್ದಾರೆ.

ಅಖಿಲ ಭಾರತ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನದ ಅಂಗವಾಗಿ, ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ ಹೊಸಮನೆ ಅವರ ಅಧ್ಯಕ್ಷತೆಯಲ್ಲಿ, ಬಾಲ ಹಾಗೂ ಕಿಶೋರ ಕಾರ್ಮಿಕ, ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ, ಈ ಮಾಹಿತಿ ನೀಡಿದ್ದಾರೆ.

ಉದ್ದಿಮೆಗಳ ಮಾಲೀಕರಿಗೆ, ಮಾಹಿತಿ ಪತ್ರಕ ವಿತರಿಸಿ, ಇಲಾಖೆ ಮೂಲಕ, ಜಾಗೃತಿ ಮೂಡಿಸಲಾಯಿತು ಎಂದಿದ್ದಾರೆ.

**ಹರ್ಷ/ಹೊಂಗಲ್/ಕೆ.ವಾ.ಇ.ಬ.**

<><><>

**ವಿಕಸಿತ ಭಾರತ; ಜಿ ರಾಮ್ ಜಿ ಯೋಜನೆ,** ಸುಧಾರಿತ ತಂತ್ರಜ್ಞಾನ ಆಧಾರಿತ ಮತ್ತು ಅಭಿವೃದ್ಧಿ ಕೇಂದ್ರಿತ ಯೋಜನೆಯಾಗಿದೆ ಎಂದು, ಉಡುಪಿ–ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ, ಹೇಳಿದ್ದಾರೆ.

ನೂತನ ಕಾಯ್ದೆ, ಪಾರದರ್ಶಕವಾಗಿದ್ದು, ಗ್ರಾಮೀಣ ಪ್ರದೇಶಗಳ ಕಾರ್ಮಿಕರಿಗೆ, ವಾರ್ಷಿಕ 125 ದಿನಗಳ, ಉದ್ಯೋಗ ಖಾತ್ರಿಯೊಂದಿಗೆ, ಆರ್ಥಿಕ ಭದ್ರತೆ ನೀಡುತ್ತದೆ, ಕಾಂಗ್ರೆಸ್ ಅಪಪ್ರಚಾರದಲ್ಲಿ ಹುರುಳ್ಲ ಎಂದು, ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ.

**ಹರ್ಷ/ಹೊಂಗಲ್/ಎಕ್ಸ್ ಖಾತೆ**

<><><>

**ಆಯುಷ್ಮಾನ್ ಭಾರತ, ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ,** ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ ಯೋಜನೆ ಅಡಿ, ಮಕ್ಕಳಾಗದ ದಂಪತಿಗಳಿಗೆ, ಸಂತಾನ ಚಿಕಿತ್ಸೆಗಳನ್ನು ಒದಗಿಸಲು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಯೋಜಿಸಿದೆ.

ಈ ಆದೇಶ ಒಂದು ವರ್ಷ ಮಾತ್ರ ಜಾರಿಯಲ್ಲಿರಲಿದೆ. ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿದ, 120 ದಂಪತಿಗೆ ಮಾತ್ರ, ಸಂತಾನ ಭಾಗ್ಯ ಚಿಕಿತ್ಸೆಗೆ, ಅನುಮೋದನೆ ದೊರೆತಿದೆ. *ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ* ಮೂಲಕ, ದಂಪತಿಗೆ ಚಿಕಿತ್ಸೆ ನೀಡಲು ಯೋಜಿಸಲಾಗಿದೆ.

**ಹರ್ಷ/ಕೆ.ವಾ.ಇ.ಬೆಂ/ಪ್ರಕಟಣೆ**

<><><>

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು,** ಸರ್ಕಾರಿ ಪಾಲಿಟೆಕ್ನಿಕ್ ಸೇರಿದಂತೆ, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ, 2 ಸಾವಿರ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು, ಆರ್ಥಿಕ ಇಲಾಖೆ ಅನುಮತಿಸಿದೆ.

ಪ್ರಥಮ ದರ್ಜೆ ಕಾಲೇಜುಗಳಲ್ಲಿ, ವಿವಿಧ ವಿಷಯಗಳ 826, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 941 ಹುದ್ದೆಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 186 ಹಾಗೂ ಬೆಂಗಳೂರಿನ, ವಿಶ್ವೇಶ್ವರಾಯ ಇಂಜಿನಿಯರಿಂಗ್ ಕಾಲೇಜು, ವಿಶ್ವವಿದ್ಯಾಲಯದಲ್ಲಿ, 47 ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು, ಉನ್ನತ ಶಿಕ್ಷಣ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.

**ಹರ್ಷ/ಪ್ರಕಟಣೆ/ಕೆ.ವಾ.ಇ.ಬೆಂ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**